ಶ್ರೀ ಎ.ಟಿ.ರಾಮಸ್ವಾಮಿ : **(ಈ) ಅರಕಲ ಗೂಡು ತಾಲ್ಲೂಕಿನ ಕೋಣನೂರಿನಲ್ಲಿ ಮೀನುಗಾರರಿಗೆ ವಸತಿಗೃಹ ನಿರ್ಮಾಣ :** ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕು ಕೊಣನೂರು ಪಟ್ಟಣದಲ್ಲಿ ಮಿನುಗಾರರಿಗೆ ಮೀನುಗಾರಿಕೆ ಇಲಾಖೆಯ ವತಿಯಿಂದ ವಸತಿಗೃಹ ನಿರ್ಮಾಣ ಮಾಡುತ್ತೇವೆ ಎಂದು ಸುಮಾರು ಒಂದು ವರ್ಷದಿಂದ ಸಂಬಂಧಪಟ್ಟ ದಾಖಲೆಗಳನ್ನು ತೆಗೆದುಕೊಂಡಿದ್ದರೂ ಕೂಡ ಇನ್ನೂ ಕೂಡ ಮನೆಗಳನ್ನು ಕಟ್ಟಿ ಕೊಡದೇ ಇರುವುದರ ಬಗ್ಗೆ ಮಾನ್ಯ ಸಚಿವರ ಗಮನಸೆಳೆಯುತ್ತಾ ತುರ್ತಾಗಿ ವಸತಿಗಳನ್ನು ನಿರ್ಮಿಸಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕಿನಲ್ಲಿರುವ ಕೋಣನೂರು ಪಟ್ಟಣದಲ್ಲಿನ ವಸತಿ ರಹಿತ ಮೀನುಗಾರರಿಗೆ ಮೀನುಗಾರಿಕಾ ಇಲಾಖೆಯ ವತಿಯಿಂದ ಕೇಂದ್ರ ಸರಕಾರದವರ ನೆರವಿನಿಂದ 38 ಮನೆಗಳನ್ನು ನಿರ್ಮಿಸಲು ದಿನಾಂಕ : 24-3-1995ರಂದು ಭಾರತ ಸರಕಾರವು ಮಂಜೂರಾತಿ ನೀಡಿ, ಕೇಂದ್ರದ ಪಾಲನ್ನು ಬಿಡುಗಡೆ ಮಾಡಿರುತ್ತದೆ. ಆರ್‌ಟಿಎ ತಡವಾಗಿ ತಲುಪಿದ್ದರಿಂದ 1994-95ನೇ ಸಾಲಿನಲ್ಲಿ ರಾಜ್ಯ ಸರಕಾರವು ಮಂಜೂರಾತಿಯನ್ನು ನೀಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಭಾರತ ಸರಕಾರದ ಪಾಲಿಗೆ ರಾಜ್ಯಸರ್ಕಾರದ ಪಾಲನ್ನು 1995-96ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಕೋಣನೂರಲ್ಲಿ 38 ವಸತಿಗೃಹಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು. 1994-95ನೇ ಸಾಲಿನಲ್ಲಿ ರಾಜ್ಯಸರಕಾರದಿಂದ ಒಟ್ಟು 645 ಮನೆಗಳನ್ನು ಕುಡಿಯುವ ನೀರಿನ ಸೌಲಭ್ಯವನ್ನು ಸುಮಾರು 2.3 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಪ್ರಸ್ತಾವನೆಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರಕಾರವು 1994-95ನೇ ಸಾಲಿನಲ್ಲಿ 62.55ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿ 402 ಮನೆಗಳನ್ನು ಮತ್ತು 18 ಕೊಳವೆ ಬಾವಿಗಳನ್ನು ರಾಜ್ಯದ ಐದು ಜಿಲ್ಲೆಗಳಾದ ಮೈಸೂರು ಶಿವಮೊಗ್ಗ, ಬಿಜಾಪುರ ಮತ್ತು ಹಾಸನ ಜಿಲ್ಲೆಗಳ ಮತ್ತು ಬೆಳಗಾಂ ಜಿಲ್ಲೆಯ ಒಟ್ಟು 20 ಗ್ರಾಮಗಳಲ್ಲಿ ನಿರ್ಮಿಸಲು ಮಂಜೂರಾತಿ ನೀಡಿದ್ದು ವಿವರವನ್ನು ಈ ಕೆಳಗೆ ನೀಡಲಾಗಿದೆ.

ಮೈಸೂರು 40 ಮನೆಗಳು 2 ಕೊಳವೆಬಾವಿಗಳು
ಶಿವಮೊಗ್ಗ 20 ಮನೆಗಳು
ಬೆಳಗಾಂ 14 ಮನೆಗಳು 1 ಕೊಳವೆಬಾವಿ
ಸದಲಾಗ 25 ಮನೆಗಳು 1 ಕೊಳವೆಬಾವಿ
ಗೊರವನಕೊಳ್ಳ, ಸೋಮಪುರ, ಬಂಡಾರ ಹಳ್ಳಿ :
50 ಮನೆಗಳು 2 ಕೊಳವೆಬಾವಿ
ಬಿಜಾಪುರ (ಬರಗುಡಿ) 20 ಮನೆಗಳು 1 ಕೊಳವೆಬಾವಿ
ರಾಜರಾಮತೀರ್ಥ 40 ಮನೆಗಳು 2 ಕೊಳವೆಬಾವಿಗಳು
ಕೇಡಗಿ 20 ಮನೆಗಳು 1 ಕೊಳವೆಬಾವಿ
ಇಂಗಳಗೇರಿ 41ಮನೆಗಳು 2 ಕೊಳವೆಬಾವಿಗಳು
ಬಾವೂರು 22 ಮನೆಗಳು 1 ಕೊಳವೆಬಾವಿ

ಜೆಂಬರದಿನ್ನಿ 18 ಮನೆಗಳು 1 ಕೊಳವೆಬಾವಿ
ಹಾಸನ
ಜಗದಗೆರೆ
ಕನ್ನಾಪುರ,
ಚಿಕ್ಕಯರಗನಾಳು
ಕಂಕೇರೆ : ನಾಗರಕೆರೆ 50 ಮನೆಗಳು 4 ಕೊಳವೆಬಾವಿಗಳು
ಕೋಣನೂರಿನಲ್ಲಿ 38 ಮನೆಗಳು

ಒಟ್ಟು 402 ಮನೆಗಳು 18 ಕೊಳವೆಬಾವಿಗಳು. 1995-96ನೇ ಸಾಲಿನಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ಕೇಂದ್ರದ ಪಾಲು 110 ಲಕ್ಷಗಳನ್ನು ಸೇರಿದಂತೆ 220 ಲಕ್ಷಗಳ ಆಯವ್ಯಯವನ್ನು ಮಾಡಿ ಕೊಡಲಾಗಿದ್ದು 402 ಮನೆಗಳ ನಿರ್ಮಾಣಕ್ಕೆ ಒಟ್ಟು 123.10ರೂಪಾಯಿಗಳು ವೆಚ್ಚವಾಗಲಿದ್ದು ಇದನ್ನು ಪೂರ್ಣವಾಗಿ ಭರಿಸಲಾಗುವುದು. ಉಳಿದ 96.95ಲಕ್ಷಗಳನ್ನು ಹೊಸ ವಸತಿಗೃಹಗಳ ಮತ್ತು ಕೊಳವೆಬಾವಿಗಳ ಮತ್ತು ಸಮುದಾಯ ಭವನಗಳ ನಿರ್ಮಾಣಕ್ಕೆ ಮತ್ತು ಹಲವು ಹಿಂದಿನ ಪ್ರಕರಣಗಳ ಹೆಚ್ಚುವ ವೆಚ್ಚವನ್ನು ಭರಿಸಲಾಗುವುದು.

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲಿನ ಮುಂದುವರಿದ ಚರ್ಚೆ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಶ್ರೀಮಾನ್ ನಾಗೇಗೌಡರು ಮಂಡಿಸಿರತಕ್ಕಂಥ ವಂದನಾ ನಿರ್ಣಯ, ಅವರ ಮೇಲೆ ಚರ್ಚೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ it is a policy document.

ಸರಕಾರ ನಡೆಸತಕ್ಕಂಥವರಿಗೆ ಈ ಪಾಲಿಸಿ ಡಾ.ಕ್ಯುಮೆಂಟ್ಸ್ ಎಂದೇನು ನಾವು ಹೇಳುತ್ತೇವೆ, ಇದಕ್ಕೆ ಇಟ್ಟುಕೊಳ್ಳಬೇಕಾದಂಥ, ಕೊಡಬಹುದಾದಂಥ ಪಾವಿತ್ರತೆಯನ್ನು ಇಟ್ಟುಕೊಂಡು ಕೊಡಬಹುದಾದಂಥ ಗೌರವವನ್ನು ಕೊಡುವುದಾದರೆ, ಈ ನಿರ್ಣಯವನ್ನು ಪಾಸ್ ಮಾಡಿಕೊಂಡು. ಇದರ ಆಧಾರದ ಮೇಲೆ ನಾವು ಬಜೆಟನ್ನು ಪಾಸ್ ಮಾಡಬೇಕು ಈ ಪಾಲಿಸಿ ಡಾಕ್ಯುಮೆಂಟ್‌ನ ಆಧಾರದ ಮೇಲೆ ಅವರ ಬಜೆಟ್ ಮಂಡನೆಯಾಗ ಬೇಕು. ಧಾಖಲಾತಿ ಹೋಗಲಿ ಎಂದು ನಾನು ಇದನ್ನು ಹೇಳುತ್ತಾ ಇದ್ದೇನೆ. ಬಜೆಟ್‌ನ್ನು ಆಗಲೇ ಪಾಸ್ ಮಾಡಿಕೊಂಡಿದ್ದೇವೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಈಗ...

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಗವರ್ನರ್‌ರವರ ಒಂದು ಭಾಷಣ ಆಗಿದೆ. ಇದು ಹೊಸ ಸರಕಾರದ ಎರಡನೆಯ ರಾಜ್ಯಪಾಲರ ಭಾಷಣ. ಗವರ್ನರ್ ಭಾಷಣದಲ್ಲಿ ಪಾಲಿಸಿ ಮ್ಯಾಟರ್ಸ್‌ನ್ನು ಹೇಳಿ ಡಾಕ್ಯೂಮೆಂಟ್ಸ್‌ನ್ನು ಕೊಟ್ಟು ಆ ಮೇಲೆ ಬಜೆಟ್‌ನ್ನು ಇಟ್ಟು, ಆ ಮೇಲೆ ಇದನ್ನು ಮಂಡಿಸಿದ್ದೇವೆ...

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಲು ಇಚ್ಛಿ ಪಟ್ಟೆ ಅಂದರೆ, ಸರಕಾರದಲ್ಲಿ ಇಂಥಹ ವಿಚಾರಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ರಾಜ್ಯಪಾಲರ ಭಾಷಣ ಅಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹರಿಯ